ಎಚ್.ಎಸ್. ವೆಂಕಟೇಶ ಮೂರ್ತಿ



## ಸುಮತೀಂದ್ರ ನಾಡಿಗ

# ಮಗುಮನದ ವಿಕ್ಷೋಭಿತ ಕವಿ...

ಇತ್ತೀಚೆಗೆ ನಿಧನರಾದ ಕವಿ ಸುಮತೀಂದ್ರ ನಾಡಿಗ(4.5.1935–7.8.2018)ರ ಕುರಿತ ನುಡಿಚಿತ್ರ ಇಲ್ಲಿದೆ...

ಕೆಲವೇ ತಿಂಗಳಲ್ಲಿ ನನಗೆ ಪ್ರಿಯರಾಗಿದ್ದ ಅನೇಕ ಸಾಹಿತಿ ಮಿತ್ರರು ಸಾವಿನ ಸರತಿ ಹಿಡಿದು ಅವಸರದಿಂದ ನಿರ್ಗಮಿಸುತ್ತಿರುವ ನೋಟ ಎದೆಯಲ್ಲಿ ತಲ್ಲಣ ಹುಟ್ಟಿಸುತ್ತಿದೆ. ಗಿರಡ್ಡಿ ಗೋವಿಂದರಾಜರ ಸಾವಿನ ಅನುಭವ ತೆಳ್ಳಗಾಗುವಷ್ಟರಲ್ಲಿ ವ್ಯಾಸರಾವ್. ಆ ವಿಷಾದ ಸ್ವಲ್ಪ ತಿಳಿಯಾಗುವ ವೇಳೆಗೆ ಸುಮತೀಂದ್ರ ನಾಡಿಗ. ನಾಡಿಗರಿಗೆ ತೀವ್ರವಾದ ಉಸಿರಾಟದ ತೊಂದರೆ ಉಂಟಾಗಿ ಫೋರ್ಟಿಸ್ ಆಸ್ಪತ್ರೆಯ ವಿಶೇಷ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬುದು ಡುಂಡಿರಾಜ್ ಅವರಿಂದ ತಿಳಿದಾಗ ಆಗಷ್ಟೇ ನಾನು, ಲಕ್ಷ್ಮಣರಾವ್ ಏರ್ಪೋರ್ಟಿನಿಂದ ಹೊರಗೆ ಬರುತ್ತಾ ಇದ್ದೆವು. ಅಲ್ಲಿಂದ ನೇರವಾಗಿ ಫೋರ್ಟಿಸ್‌ಗೇ ಹೋಗುವುದೆಂದು ನಿಶ್ಚಯಿಸಿ ಆಸ್ಪತ್ರೆಗೆ ದೌಡಾಯಿಸಿದೆವು. ಆಸ್ಪತ್ರೆಯಲ್ಲಿ ಡುಂಡಿಯೂ ನಮ್ಮನ್ನು ಸೇರಿಕೊಂಡರು. ನಾಡಿಗರ ಮಗಳು ಸಪ್ನಾಳನ್ನು ಸಂಪರ್ಕಿಸಿ ನಾವು ನಾಡಿಗರು ಇದ್ದ ವಾರ್ಡಿಗೆ ಹೋದಾಗ ಬಹಿರಂಗದ ಯಾವ ಪ್ರಜ್ಞೆಯೂ ಇರದ ನಾಡಿಗ ತೀವ್ರವಾಗಿ ನರಳುತ್ತಾ ಮಲಗಿದ್ದರು. ನಮ್ಮ ಕೂಗು ಅವರಿಗೆ ತಾಗಲಿಲ್ಲ. ನಾಡಿಗರ ಪತ್ನಿ ಮಾಲತಿಯವರ ಮುಖ